ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ06-07-2026 ರಂದು ಬೊಧಿಸಲಾಯಿತು.

**<u>ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ</u>**

ಈ ದಾವೆಯನ್ನು ವಾದಿಯು ಸರ್ವೆ ನಂ 60 ಕ್ಕೆ ಸಂಬಂದಿಸಿದಂತೆ ದಾಖಲಿಸಿರುತ್ತಾರೆ. ಸರ್ವೆ ನಂ 60 ನಿಮ್ಮ ಹಕ್ಕಿಗೆ ಸಂಬಂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಅದೇ ರೀತಿ ನೀವು ಸರ್ವೆ ನಂ 60ರಲ್ಲಿ ವೈವಾಟಿಯಲ್ಲಿಯೂ ಸಹ ಇರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ .

ದಾವಾಸ್ವತ್ತಿನ ಉತ್ತರ ದಿಕ್ಕಿಗೆ ಸರ್ವೆ ನಂ 59 ಇರುತ್ತದೆ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ನನ್ನ ವೈವಾಟಿಯಲ್ಲಿರುವ ಸರ್ವೆ ನಂ 59/3 ಇರುತ್ತದೆ ಎಂದು ನುಡಿಯುತ್ತಾರೆ. ಸರ್ವೆ ನಂ 59/3 ನನ್ನ ವೈವಾಟಿಗೆ ಸೇರಿದ ಜಮೀನು ಆಗಿರುತ್ತದೆ .

ನೀವು ಹಾಗೂ ವಾದಿ ಇಬ್ಬರೂ ಅನಾದಿಕಾಲದಿಂದಲೂ ಹೇಗೆ ವೈವಾಟು ಮಾಡುತ್ತಿರುವಿರೊ ಅದೇರೀತಿ ಇಂದಿಗೂ ಸಹ ವೈವಾಟಿ ಮಾಡುತ್ತಿದ್ದಿರಾ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಮ್ಮ ಹಾಗೂ ವಾದಿಯರ ನಡುವೆ ಅನಾದಿಕಾಲದಿಂದಲೂ ವೈವಾಟಿ ಮಾಡಿಕೊಂಡು ಬಂದಿರುವ ಬಗ್ಗೆ ತಕರಾರು ಆಗಿರುತ್ತದೆಯೇ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ತಕರಾರು ಆಗಿರುತ್ತದೆ ಎಂದು ನುಡಿಯುತ್ತಾರೆ . ಸದರಿ ತಕರಾರು 2024 ನೇ ಇಸವಿಯಲ್ಲಿ ಪ್ರಾರಂಭ ಆಗಿರುತ್ತದೆ ಎಂದರೆ ಸರಿ.

ನಿಮ್ಮ ಪ್ರತಿವಾದ ಪತ್ರದಲ್ಲಿ ಪ್ಯಾರಾ ನಂಬರ 4 ರಲ್ಲಿ ನಿಮ್ಮ ಸ್ಪಷ್ಟವಾದ ಹೇಳಿಕೆಯನ್ನು ನೀವು ತೋರಿಸಿದ್ದು ಅದನ್ನು ಹೊರತುಪಡಿಸಿ ಈ ದಾವೆಯಲ್ಲಿ ನಿಮ್ಮದು ಬೇರೇ ತಕರಾರು ಇರುವುದಿಲ್ಲ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಅವರ ಪ್ರತಿವಾದ ಪತ್ರವನ್ನು ಓದಿ ಹೌದು ಎಂದು ನುಡಿಯುತ್ತಾರೆ . ದಾವಾಸ್ವತ್ತಿಗೆ ಸಂಬಂದಿಸಿದಂತೆ ಪೋಡಿಯ ವಿಚಾರಕ್ಕೆ ಬಂದಾಗ ಅದು ವಾದಿ ಹಾಗೂ ಅವರ ಸಹೋದರರ ನಡುವೆ ಇರುವ ವಿವಾದ ಆಗಿದ್ದು, ಅದು ನಿಮಗೆ ಸಂಬಂದ ಇರುವುದಿಲ್ಲ ? ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ವೈವಾಟಿಗೆ ಸಂಬಂದಿಸಿದಂತೆ ತಕರಾರು ಬಂದಾಗ ನ್ಯಾಯಾಲಯಕ್ಕೆ ಬರುವುದು ಸಹಜವಾಗಿರುತ್ತದೆ ಎಂದರೆ ಸರಿ.

ಮರುವಿಚಾರಣೆಃ ಇರುವುದಿಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಸಾ.ಓ.ಹೇ.ಸ.ಒ

ಸಹಿ ಇದೆ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ

ಸಿದ್ದಾಪುರ